

# ಪ್ರಾರ್ಥನೆ



( ಶ್ರೀಕೃಷ್ಣನ ಮೇಲಿನ ಕುಂತಿಯ ಪ್ರಾರ್ಥನೆ —ಶ್ರೀಮದ್ಭಾಗವತದಲ್ಲಿ )

ನಮಸ್ಯೇ ಪುರುಷಂ ತ್ವಾದ್ಯಮೀಶ್ವರಂ ಪ್ರಕೃತೇಃ ಪರಮ್ ।
ಅಲಕ್ಷ್ಯಂ ಸರ್ವಭೂತಾನಾಮಂತರ್ಬಹಿರವಸ್ಥಿತಮ್ ॥

ಆದ್ಯನೂ, ಈಶ್ವರನೂ, ಪ್ರಕೃತಿಗಿಂತ ಶ್ರೇಷ್ಠನೂ ಅಗೋಚರನೂ ಸರ್ವಭೂತಗಳ ಒಳಗೂ ಹೊರಗೂ ಇರುವವನೂ ಆದ ಪುರುಷೋತ್ತಮನಿಗೆ ನಮಿಸುತ್ತೇನೆ.

ಮಾಯಾಯವನಿಕಾಚ್ಛನ್ನಮಜ್ಞಾಧೋಕ್ಷಜಮವ್ಯಯಮ್ ।
ನ ಲಕ್ಷ್ಯಸೇ ಮೂಢದೃಶಾ ನಟೋ ನಾಟ್ಯಧರೋ ಯಥಾ ॥

ಮಾಯೆಯ ತೆರೆಯಿಂದ ಮರೆಯಾಗಿರುವವನೂ,ಇಂದ್ರಿಯಾತೀತನೂ ಆದ ನಿನ್ನನ್ನು ಅಜ್ಞಳಾದ ನಾನು ನಮಸ್ಕರಿಸುತ್ತೇನೆ; ಪಾತ್ರವನ್ನು ಧರಿಸಿರುವ ನಟನಂತೆ ಇರುವ ನಿನ್ನನ್ನು ಮೂಢರು ಅರಿಯಲಾರರು.

ಕೃಷ್ಣಾಯ ವಾಸುದೇವಾಯ ದೇವಕೀನಂದನಾಯ ಚ ।
ನಂದಗೋಪಕುಮಾರಾಯ ಗೋವಿಂದಾಯ ನಮೋ ನಮಃ ॥

ಕೃಷ್ಣನಿಗೆ, ವಾಸುದೇವನಿಗೆ, ದೇವಕೀನಂದನಿಗೆ, ನಂದಗೋಪಕುಮಾರನಿಗೆ ಗೋವಿಂದನಿಗೆ ನಮೋ ನಮಃ.

ನಮಃ ಪಂಕಜನಾಭಾಯ ನಮಃ ಪಂಕಜಮಾಲಿನೇ ।
ನಮಃ ಪಂಕಜನೇತ್ರಾಯ ನಮಸ್ತೇ ಪಂಕಜಾಂಘ್ರಯೇ ॥

ಪದ್ಮನಾಭನಿಗೆ ನಮಸ್ಕಾರ, ಕಮಲಮಾಲೆಗಳನ್ನು ಧರಿಸಿರುವ ನಿನಗೆ ನಮಸ್ಕಾರ, ಪಂಕಜನೇತ್ರನಿಗೆ ನಮಸ್ಕಾರ, ಪಂಕಜಾಂಘ್ರಿಗೆ ನಮಸ್ಕಾರ.

ವಿಪದಃ ಸಂತು ನಃ ಶಶ್ವತ್ ತತ್ರ ತತ್ರ ಜಗದ್ಗುರೋ ।
ಭವತೋ ದರ್ಶನಂ ಯತ್ಸ್ಯಾದ್ ಅಪುನರ್ಭವದರ್ಶನಮ್ ॥

ಹೇ ಜಗದ್ಗುರು, ಯಾವ ವಿಪತ್ತುಗಳ ಮೂಲಕ ಪುನರ್ಜನ್ಮವನ್ನು ಉಂಟುಮಾಡದ ನಿನ್ನ ದರ್ಶನವು ಪ್ರಾಪ್ತವಾಗುವುದೋ, ಅಂತಹ ವಿಪತ್ತುಗಳು ನಮಗೆ ಯಾವಾಗಲೂ ಬರಲಿ.

ನಮೋಽಕಿಂಚನವಿತ್ತಾಯ ನಿವೃತ್ತಗುಣವೃತ್ತಯೇ ।
ಆತ್ಮಾರಾಮಾಯ ಶಾಂತಾಯ ಕೈವಲ್ಯಪತಯೇ ನಮಃ ॥

ವಿರಕ್ತರನ್ನೇ ಧನವಾಗಿ ತಿಳಿದಿರುವವನೂ ಗುಣವೃತ್ತಿಗಳಿಂದ ಬಿಡಲ್ಪಟ್ಟವನೂ ಆತ್ಮಾರಾಮನೂ ಶಾಂತನೂ ಕೈವಲ್ಯಪತಿಯೂ ಆದ ನಿನಗೆ ನಮಸ್ಕಾರ.

ಶೃಣ್ವಂತಿ ಗಾಯಂತಿ ಗೃಣಂತ್ಯಭೀಕ್ಷ್ಣಶಃ
ಸ್ಮರಂತಿ ನಂದಂತಿ ತವೇಹಿತಂ ಜನಾಃ ।
ತ ಏವ ಪಶ್ಯಂತ್ಯಚಿರೇಣ ತಾವಕಂ
ಭವಪ್ರವಾಹೋಪರಮಂ ಪದಾಂಬುಜಮ್ ॥

ಯಾರು ನಿನ್ನ ಚರಿತ್ರೆಯನ್ನು ಅನವರತ ಹೇಳುತ್ತಿರುವರೊ, ಹಾಡುತ್ತಿರುವರೊ, ಹೊಗಳುತ್ತಿರುವರೊ, ಸ್ಮರಿಸುತ್ತಿರುವರೊ, ನಿನ್ನ ಲೀಲೆಯಲ್ಲಿ ಆನಂದವನ್ನು ಪಡೆಯುತ್ತಿರುವರೊ ಅವರು ಜನನ-ಮರಣಗಳ ಪ್ರವಾಹವನ್ನು ನಿಲ್ಲಿಸುವಂತಹ ನಿನ್ನ ಪಾದಪದ್ಮಗಳನ್ನು ಬೇಗನೆ ನೋಡುವರು.

# ಸೂಕ್ತಿಪ್ರಭ

ಆರೋಪ್ಯತೇ ಶಿಲಾ ಶೈಲೇ ಯತ್ನೇನ ಮಹತಾ ಯಥಾ ।
ನಿಪಾತ್ಯತೇ ಕ್ಷಣೇನಾಧಸ್ತಥಾತ್ಮಾ ಗುಣದೋಷಯೋಃ ॥

ಪರ್ವತದ ಮೇಲೆ ಶಿಲೆಯನ್ನು ತಳ್ಳಿಕೊಂಡು ಹೋಗುವುದು ಬಹಳ ಕಷ್ಟ. ಆದರೆ ಅದೇ ಶಿಲೆ ಒಂದೇ ಕ್ಷಣದಲ್ಲಿ ಕೆಳಗೆ ಉರುಳಿಕೊಂಡು ಬರುತ್ತದೆ. ಹಾಗೆಯೇ ಗುಣವನ್ನು ಪಡೆಯುವುದು ಅತಿ ಪ್ರಯಾಸದಿಂದ ಮತ್ತು ದೋಷಗಳು ಸುಲಭವಾಗಿ ಬಂದುಬಿಡುತ್ತವೆ. —ಸುಭಾಷಿತ

ಕಾತರಾ ಏವ ಜಲ್ಪಂತಿ ಯದ್ಭಾಗ್ಯಂ ತತ್ಭವಿಷ್ಯತಿ ।
ಸಾಹಸಹೀನ ವ್ಯಕ್ತಿಗಳು ಮಾತ್ರ ಭಾಗ್ಯವಿದ್ದಂತೆ ಆಗುತ್ತದೆ ಎಂದು ಹೇಳುತ್ತಾರೆ. —ಲೋಕೋಕ್ತಿ

ಅತ್ಯಂತ ಕತ್ತಲೆಯ ರಾತ್ರಿಯಲ್ಲಿ ನಕ್ಷತ್ರಗಳು ಅತ್ಯಂತ ಪ್ರಕಾಶಮಾನವಾಗಿ ಹೊಳೆಯುತ್ತವೆ. —ಅನಾಮಿಕ

ಗುಣಾಃ ಪೂಜಾಸ್ಥಾನಂ ಗುಣಿಷು ನ ಚ ಲಿಂಗಂ ನ ಚ ವಯಃ ।
ಗುಣವಂತರ ಗುಣವೇ ಗೌರವಕ್ಕೆ ಯೋಗ್ಯವಾದದ್ದು,ಅವರ ಲಿಂಗಭೇದ ಅಥವಾ ವಯೋಭೇದ ಮುಖ್ಯವಲ್ಲ.

—ಭವಭೂತಿ

ನನಗೆ ನಾಳೆಯ ಭಯವಿಲ್ಲ. ಏಕೆಂದರೆ ನಾನು ನಿನ್ನೆಯನ್ನು ನೋಡಿದ್ದೇನೆ ಮತ್ತು ಇಂದನ್ನು ಪ್ರೀತಿಸುತ್ತೇನೆ.

— ವಿಲಿಯಂ ವೈಟ್ (William White)

ನಿಮಗೆ ಬೇಕಾದುದನ್ನು ಪಡೆಯುವ ಪ್ರಯತ್ನ ಮಾಡುತ್ತಿರುವಾಗ ನಿಮ್ಮಲ್ಲಾಗಲೆ ಇರುವುದರ ಬಗ್ಗೆ ತೃಪ್ತಿಯಿರಲಿ.ಕೃತಿಯಲ್ಲಿ ಮಾತ್ರವೇ ಶಾಂತಿ ಲಭಿಸುತ್ತದೆ. ಆದ್ದರಿಂದಲೇ ಕೆಲಸ ಮಾಡುವ ನಮ್ರರೇ ಶ್ರೇಷ್ಠರಾಗುತ್ತಾರೆ.

—"Letters of the Scattered Brotherhood"